All India Radio: Bangalore
National Bulletin In Kannada
04.02.2026 1935 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
*****************

ಮುಖ್ಯಾಂಶಗಳು

೧. ಮಣಿಪುರದಲ್ಲಿ ಮುಕ್ತಾಯಗೊಂಡ ರಾಷ್ಟ್ರಪತಿ ಆಡಳಿತ

೨. ಪ್ರಧಾನಿ ನರೇಂದ್ರ ಮೋದಿ ಇದೇ ವಾರಾಂತ್ಯ ಮಲೇಷಿಯಾ ಭೇಟಿ

೩. ಸಂಸತ್ತಿನ ಉಭಯ ಸದನಗಳಲ್ಲಿ ರಾಷ್ಟ್ರಪತಿ ಭಾಷಣಕ್ಕೆ ವಂದನೆ ಸೂಚಿಸುವ ನಿರ್ಣಯ ಚರ್ಚೆ; ಲೋಕಸಭೆಯಲ್ಲಿ ಗದ್ದಲ, ಕಲಾಪ ಮುಂದೂಡಿಕೆ

೪. ಭಾರತ-ಅಮೆರಿಕಾ ವ್ಯಾಪಾರ ತಿಳಿವಳಿಕೆಯಲ್ಲಿ ರಸಗೊಬ್ಬರ ಕೃಷಿ ಬಗ್ಗೆ ಕಾಳಜಿ ಸಚಿವ ಪಿಯೂಶ್ ಗೋಯಲ್ ಸ್ಪಷ್ಟನೆ

೫. ಅಂಡರ್ ೧೯ ಏಕದಿನ ವಿಶ್ವಕಪ್ ಕ್ರಿಕೆಟ್; ಅಫ್ಘಾನಿಸ್ತಾನ ವಿರುದ್ಧ ಗೆಲ್ಲಲು ಭಾರತಕ್ಕೆ ೩೧೧ ರನ್‌ಗಳ ಗುರಿ

*****************

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಇಂದಿನಿಂದ ಅನ್ವಯವಾಗುವಂತೆ ಹಿಂತೆಗೆದುಕೊಂಡಿದ್ದಾರೆ. ಈ ಕುರಿತಂತೆ ಗೃಹ ಸಚಿವಾಲಯ ಅಧಿಕೃತ ಅಧಿಸೂಚನೆ ಹೊರಡಿಸಿದೆ. ಮಣಿಪುರದಲ್ಲಿ ಕಳೆದ ವರ್ಷ ಸಂವಿಧಾನದ ೩೫೬ನೇ ಕಲಂ ಅಡಿ ವಿಧಿಸಲಾಗಿದ್ದ ಆಳ್ವಿಕೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಹಿಂತೆಗೆದುಕೊಂಡಿದ್ದಾರೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಕಳೆದ ವರ್ಷದ ಫೆಬ್ರುವರಿ ೧೩ ರಂದು ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸಲಾಗಿತ್ತು.

*****************

ಪ್ರಧಾನಿ ನರೇಂದ್ರ ಮೋದಿ ಇದೇ ೭ ರಿಂದ ಎರಡು ದಿನಗಳ ಕಾಲ ಮಲೇಷಿಯಾಕ್ಕೆ ಭೇಟಿ ನೀಡಲಿದ್ದಾರೆ. ಮಲೇಷಿಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಆಹ್ವಾನದ ಮೇರೆಗೆ ಪ್ರಧಾನಿ ನರೇಂದ್ರ ಮೋದಿ ಈ ಪ್ರವಾಸ ಕೈಗೊಳ್ಳುತ್ತಿದ್ದು, ಇದು ಅವರ ಮೂರನೇ ಭೇಟಿಯಾಗಿದೆ. ಹಾಗೂ ೨೦೨೪ರ ಆಗಸ್ಟ್‌ನಲ್ಲಿ ಸಮಗ್ರ ಕಾರ್ಯತಂತ್ರ ಸಹಭಾಗಿತ್ವ ದ್ವಿಪಕ್ಷೀಯ ಸಂಬಂಧದ ಬಳಿಕ ನೀಡುತ್ತಿರುವ ಮೊದಲ ಭೇಟಿಯಾಗಿದೆ.

ಪ್ರಧಾನಿ ಮೋದಿ ಅವರು, ತಮ್ಮ ಭೇಟಿ ವೇಳೆ ಮಲೇಷಿಯಾ ಪ್ರಧಾನಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಅಲ್ಲಿರುವ ಭಾರತೀಯ ಸಮುದಾಯ ಹಾಗೂ ಉದ್ದಿಮೆ, ವ್ಯಾಪಾರಸ್ಥರ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಪ್ರಧಾನಿ ಅವರ ಭೇಟಿ ಸಂದರ್ಭದಲ್ಲೇ ೧೦ನೇ ಭಾರತ-ಮಲೇಷಿಯಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವೇದಿಕೆಯ ಕಾರ್ಯಕ್ರಮ ಕೂಡ ನಡೆಯಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಭಾರತ-ಮಲೇಷಿಯಾ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮೈತ್ರಿ ಹೊಂದಿದ್ದು, ಮಲೇಷಿಯಾದಲ್ಲಿ ಸುಮಾರು ೨.೯ ಮಿಲಿಯನ್ ಭಾರತೀಯ ಸಮುದಾಯ ಜನರಿದ್ದಾರೆ. ಪ್ರಧಾನಿ ಅವರ ಈ ಭೇಟಿ ಉಭಯ ದೇಶಗಳ ನಡುವಿನ ಸಂಬಂಧವನ್ನು ಬಲಗೊಳಿಸಲಿದೆ ಎಂದು ನಮ್ಮ ಭಾತ್ಮೀದಾರರು ವರದಿ ಮಾಡಿದ್ದಾರೆ.

ಭಾರತ-ಮಲೇಷಿಯಾ ನಡುವಿನ ವಾಣಿಜ್ಯ, ಬಂಡವಾಳ ಹೂಡಿಕೆ, ರಕ್ಷಣೆ, ಸಮುದ್ರಯಾನ ಸಹಕಾರ, ಡಿಜಿಟಲ್ ಮತ್ತು ಹಣಕಾಸು ತಂತ್ರಜ್ಞಾನ, ಇಂಧನ, ಆರೋಗ್ಯ, ಶಿಕ್ಷಣ ಮತ್ತು ಸಾಂಸ್ಕೃತಿ ವಿನಿಮಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರ ಕುರಿತಂತೆ ಉಭಯ ನಾಯಕರು ಮಾತುಕತೆ ನಡೆಸಲಿದ್ದಾರೆ.

*****************

ಸಂಸತ್ತಿನ ಉಭಯ ಸದನಗಳು ಇಂದು ರಾಷ್ಟ್ರಪತಿ ಅವರ ಭಾಷಣಕ್ಕೆ ವಂದನೆ ಸೂಚಿಸುವ ನಿರ್ಣಯ ಕುರಿತಾದ ಚರ್ಚೆಯನ್ನು ಮುಂದುವರೆಸಿದವು.

ಲೋಕಸಭೆಯಲ್ಲಿ ವಂದನಾ ನಿರ್ಣಯ ಚರ್ಚೆ ಕೈಗೆತ್ತಿಕೊಳ್ಳುತ್ತಿದ್ದಂತೆ ವಿರೋಧ ಪಕ್ಷಗಳ ಸದಸ್ಯರ ಘೋಷಣೆ ಹಿನ್ನೆಲೆಯಲ್ಲಿ ಗೊಂದಲದ ವಾತಾವರಣ ಉಂಟಾಗಿ ಸದನವನ್ನು ಮೂರು ಬಾರಿ ಮುಂದೂಡಿದ ಘಟನೆ ನಡೆಯಿತು.

ಕಾಂಗ್ರೆಸ್ ಡಿಎಂಕೆ, ಟಿಎಂಸಿ ಹಾಗೂ ಇತರ ಸದಸ್ಯರು ಭಾರತ ಅಮೆರಿಕಾ ವ್ಯಾಪಾರ ಒಪ್ಪಂದ, ಚೀನಾದೊಂದಿಗಿನ ಗಡಿ ವಿಚಾರ ಕುರಿತಂತೆ ಸರ್ಕಾರದ ವಿರುದ್ಧ ಪದೇ ಪದೇ ಘೋಷಣೆ ಮಾಡಿ ಕಲಾಪಕ್ಕೆ ಅಡ್ಡಿ ಮಾಡಿದರು.

ಮೂರು ಮುಂದೂಡಿಕೆ ನಂತರ ಸದನ ಸಂಜೆ ೫ ಗಂಟೆಗೆ ಸೇರಿದಾಗ ಕಾಂಗ್ರೆಸ್, ಟಿಎಂಸಿ ಇತರ ಸದಸ್ಯರು ಸಭಾಧ್ಯಕ್ಷರ ಮುಂಭಾಗದಲ್ಲಿ ಸೇರಿ ಮತ್ತೆ ಘೋಷಣೆ ಹಾಕಿದರು. ಸಭಾಧ್ಯಕ್ಷರು ಕಲಾಪವನ್ನು ಸುಗಮವಾಗಿ ನಡೆಸಲು ಸಹಕರಿಸುವಂತೆ ಅನೇಕ ಬಾರಿ ಕೋರಿದರು. ಸದಸ್ಯ ಪಿ.ಪಿ.ಚೌಧರಿ ಮಾತನಾಡಲು ಯತ್ನಿಸಿದಾಗ ಪ್ರತಿಪಕ್ಷಗಳ ಸದಸ್ಯರ ಪ್ರತಿಭಟನೆ, ಘೋಷಣೆ ಮುಂದುವರೆಯಿತು. ಗದ್ದಲದ ವಾತಾವರಣದಲ್ಲಿ ಸಭಾಧ್ಯಕ್ಷರು ಸದನದ ಕಲಾಪವನ್ನು ನಾಳೆಗೆ ಮುಂದೂಡಿದರು.

ಎರಡನೇ ಮುಂದೂಡಿಕೆ ನಂತರ ಲೋಕಸಭೆ ಸಮಾವೇಶಗೊಂಡಾಗ ಟಿಡಿಪಿಯ ಜಿ.ಎಂ.ಬಾಲಯೋಗಿ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿ, ರಾಷ್ಟ್ರಪತಿ ಅವರ ಭಾಷಣ ಸುಧಾರಣೆ, ಎಲ್ಲರನ್ನೂ ಒಳಗೊಂಡ ದೀರ್ಘಾವಧಿಯ ಸ್ಪರ್ಧಾತ್ಮಕತೆ ರೂಪಿಸುವ ರಾಷ್ಟ್ರೀಯ ಮಾರ್ಗ ನಕ್ಷೆಯನ್ನು ಸಾಧರಪಡಿಸುತ್ತದೆ.

ವಿದ್ಯುನ್ಮಾನ ತಯಾರಿಕಾ ಘಟಕಗಳಲ್ಲಿ ೨೫ ಲಕ್ಷ ಉದ್ಯೋಗ ಸೃಷ್ಟಿ ವಿವಿಧ ಮಾಹಿತಿ ತಂತ್ರಜ್ಞಾನ ಸೇವೆಗಳಲ್ಲಿ ಒಂದು ಕೋಟಿಗೂ ಅಧಿಕ ಯುವಜನರ ನಿಯೋಜನ ಕುರಿತಂತೆ ಭಾಷಣದಲ್ಲಿ ಪ್ರಸ್ತಾಪಿಸಲಾಗಿದೆ ಎಂದರು.

ಬಿಜೆಪಿಯ ನಿಶಿಕಾಂತ್ ದುಬೆ ವಂದನಾ ನಿರ್ಣಯ ಬೆಂಬಲಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಬಳಸಲೆತ್ನಿಸಿದ ವಿಷಯ ಕುರಿತಂತೆ ಪ್ರತಿಪಕ್ಷಗಳ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದಾಗ ಗದ್ದಲದ ಮಧ್ಯೆ ಸಭಾಧ್ಯಕ್ಷರು ಸದನವನ್ನು ಕೆಲಕಾಲ ಮುಂದೂಡಿದರು.

*****************

ರಾಜ್ಯಸಭೆಯಲ್ಲಿ ರಾಷ್ಟ್ರಪತಿ ಅವರ ಭಾಷಣಕ್ಕೆ ವಂದನೆ ಸಲ್ಲಿಸುವ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಸದನದ ನಾಯಕ ಜೆ.ಪಿ.ನಡ್ಡಾ ಭಾಷಣ ಅಮೃತ ಕಾಲದ ಸಂಕೇತವಾಗಿದೆ. ಭಾರತ ವಿಶ್ವದ ಬೃಹತ್ ಆರ್ಥಿಕತೆಯಾಗಿ ತ್ವರಿತಗತಿಯಲ್ಲಿ ಬೆಳೆಯುತ್ತಿರುವುದನ್ನು ಸಾದರಪಡಿಸಲಾಗಿದೆ. ಸರ್ಕಾರ ಬದಲಾವಣೆ ಸಾಧನೆ ಹಾಗೂ ಪರಿವರ್ತನೆ ದೃಷ್ಟಿಯನ್ನಿಟ್ಟುಕೊಂಡು ಕೆಲಸ ಮಾಡುತ್ತಿದೆ ಎಂದರು.

ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಸಾಮಾಜಿಕ ನ್ಯಾಯ ಹಾಗೂ ಸಾಮರಸ್ಯ ಹದಗೆಟ್ಟಿದೆ, ಪರಿಶಿಷ್ಟ ವರ್ಗದ ಮಹಿಳೆಯರ ಮೇಲಿನ ಅಪರಾಧ ಹೆಚ್ಚುತ್ತಿದೆ ಎಂದು ಆಪಾದಿಸಿದರು. ಸರ್ಕಾರ ಮಹಿಳೆಯರಿಗಾಗಿ ಮೀಸಲಾತಿ ಉಪಕ್ರಮವನ್ನು ಜಾರಿಗೊಳಿಸುತ್ತಿಲ್ಲವೇಕೆ ಎಂದು ಪ್ರಶ್ನಿಸಿದರು.

*****************

ಭಾರತ-ಅಮೆರಿಕಾ ವ್ಯಾಪಾರ ತಿಳಿವಳಿಕೆಯಲ್ಲಿ ರಸಗೊಬ್ಬರ ಹಾಗೂ ಕೃಷಿಯಂತಹ ಸಂವೇದನಾಶೀಲ ರಂಗಗಳ ಬಗ್ಗೆ ಭಾರತ ಸರ್ಕಾರ ಕಾಳಜಿವಹಿಸಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಉದ್ದಿಮೆ ಖಾತೆ ಸಚಿವ ಪಿಯೂಶ್ ಗೋಯಲ್ ಸ್ಪಷ್ಟಪಡಿಸಿದ್ದಾರೆ.

ರಾಜ್ಯಸಭೆಯಲ್ಲಿಂದು ಹೇಳಿಕೆ ನೀಡಿದ ಪಿಯೂಶ್ ಗೋಯಲ್, ಈ ತಿಳಿವಳಿಕೆ ಉದ್ಯಮಗಳಿಗೆ, ಕುಶಲ ಕೆಲಸಗಾರರಿಗೆ ಹೊಸ ಅವಕಾಶಗಳನ್ನು ಕಲ್ಪಿಸಲಿದೆ ಎಂದರು.

ತಯಾರಿಕಾ ಕ್ಷೇತ್ರವನ್ನು ಬಲಪಡಿಸಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಲಿದೆ. ಉಭಯ ದೇಶಗಳಿಗೂ ಹೊಸ ವ್ಯಾಪಾರದ ಅವಕಾಶಗಳನ್ನು ಅನಾವರಣಗೊಳಿಸಲಿದೆ. ಆರ್ಥಿಕ ಬೆಳವಣಿಗೆಯನ್ನು ಈ ಒಪ್ಪಂದವು ಉತ್ತೇಜಿಸಲಿದೆ. ಪತ್ರ ಪ್ರಕ್ರಿಯೆ ನಂತರ ಒಪ್ಪಂದದ ವಿವರಗಳನ್ನು ಪ್ರಕಟಿಸಲಾಗುವುದು ಎಂದು ಸಚಿವ ಪಿಯೂಶ್ ಗೋಯಲ್ ಹೇಳಿದರು.

ದೇಶದ ೧೪೦ ಕೋಟಿ ಜನರ ಇಂಧನ ಅವಶ್ಯಕತೆ ಹಿತರಕ್ಷಣೆ ಕೇಂದ್ರ ಸರ್ಕಾರದ ಬೃಹತ್ ಆದ್ಯತೆಯಾಗಿದೆ ಎಂದು ಸ್ಪಷ್ಟಪಡಿಸಿದ ಅವರು, ಅಮೆರಿಕಾ ಅಧ್ಯಕ್ಷ ಟ್ರಂಪ್ ಭಾರತದಿಂದಾಗುವ ರಫ್ತು ಸುಂಕವನ್ನು ಶೇಕಡ ೧೮ಕ್ಕೆ ಕಡಿತಗೊಳಿಸಿರುವುದು ಇತರ ಅನೇಕ ದೇಶಗಳಿಗಿಂತ ಕಡಿಮೆಯಾಗಿದೆ. ಇದು ಅಮೆರಿಕಾ ಮಾರುಕಟ್ಟೆಯಲ್ಲಿ ಭಾರತದ ರಫ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲಿದೆ ಎಂದರು.

*****************

ಭಾರತ-ಅಮೆರಿಕಾ ವ್ಯಾಪಾರ ತಿಳಿವಳಿಕೆಯಿಂದ ರಾಷ್ಟ್ರದ ಒಟ್ಟು ದೇಶೀಯ ಉತ್ಪನ್ನ- ಜಿಡಿಪಿ ಮಾತ್ರವಲ್ಲದೇ, ಜನಸಾಮಾನ್ಯರ ಆರ್ಥಿಕ ಸಾಮರ್ಥ್ಯ ಬಲಗೊಳ್ಳಲಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಶಕ್ತೀಕರಣ ಖಾತೆ ಸಚಿವ ವೀರೇಂದ್ರ ಕುಮಾರ್ ಹೇಳಿದ್ದಾರೆ.

ಈ ಒಪ್ಪಂದ, ಭವಿಷ್ಯದಲ್ಲಿ ಉತ್ತಮ ಫಲಿತಾಂಶ ತರಲಿದೆ ಎಂದು ಅವರು ಹೇಳಿದರು.

ಈ ಕುರಿತಂತೆ ಪ್ರತಿಪಕ್ಷಗಳು ಮಾಡುವ ಟೀಕೆ, ಅವರ ಹತಾಶೆ ಹೇಳಿಕೆಗಳಾಗಿವೆ ಎಂದು ಸಚಿವ ವೀರೇಂದ್ರ ಕುಮಾರ್ ಪ್ರತಿಕ್ರಿಯೆ ನೀಡಿದರು.

*****************

ದೇಶವನ್ನು ೨೦೨೯ರ ವೇಳೆಗೆ ಮಾದಕ ದ್ರವ್ಯ ಮುಕ್ತವನ್ನಾಗಿಸಲು ಸಂಬಂಧಪಟ್ಟ ಎಲ್ಲ ಆಡಳಿತಗಳು ೨೦೨೬-೨೦೨೯ರ ಮೂರು ವರ್ಷಗಳ ಅವಧಿಗಾಗಿ ಮಾರ್ಗ ನಕ್ಷೆ ರೂಪಿಸುವಂತೆ ಕೇಂದ್ರ ಸರ್ಕಾರ ಮನವಿ ಮಾಡಿದೆ.

ರಾಜ್ಯಸಭೆಗೆ ಇಂದು ನೀಡಿದ ಲಿಖಿತ ಉತ್ತರದಲ್ಲಿ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ, ಕಳೆದ ಐದು ವರ್ಷಗಳಲ್ಲಿ ೧ ಲಕ್ಷ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ೬೮ ಲಕ್ಷ ಕಿಲೋಗ್ರಾಮ್ ಮಾದಕ ದ್ರವ್ಯಗಳನ್ನು ವಶಪಡಿಸಿಕೊಳ್ಳಲಾಗಿದೆ. ಮಾದಕ ದ್ರವ್ಯ ಸಾಗಾಟ ಮತ್ತು ಡಿಜಿಟಲ್ ಹಣಪಾವತಿ ಪತ್ತೆಗೆ ಸರ್ಕಾರ ವಿವಿಧ ಕ್ರಮಗಳನ್ನು ತೆಗೆದುಕೊಂಡಿದೆ.

ಪೊಲೀಸರಿಗೆ ನೆರವಾಗಲು ಇ-ಸಾಕ್ಷ್ಯ ವಿನ್ಯಾಸ ಪೋರ್ಟಲ್‌ನ್ನು ವಿನ್ಯಾಸಗೊಳಿಸಲಾಗಿದೆ ಎಂದು ಹೇಳಿದ್ದಾರೆ.

*****************

ದೇಶದ ಅಗ್ರಗಣ್ಯ ಕಬ್ಬಿಣ ಅದಿರು ಉತ್ಪಾದಕ ಸಂಸ್ಥೆಯಾದ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ- ಎನ್‌ಎಂಡಿಸಿ ಪ್ರಸ್ತುತ ಹಣಕಾಸು ವರ್ಷದ ಮೊದಲ ಮೂರು ತ್ರೈಮಾಸಿಕದಲ್ಲಿ ಬಾರಿ ಪ್ರಮಾಣದ ಕಬ್ಬಿಣ ಅದಿರು ಉತ್ಪಾದಿಸಿದೆ.

ಕಂಪನಿ ಈ ಅವಧಿಯಲ್ಲಿ ೫ ಪಾಯಿಂಟ್ ೫೬ ಮಿಲಿಯನ್ ಟನ್ ಕಬ್ಬಿಣದ ಅದಿರು ಉತ್ಪಾದಿಸಿದ್ದು, ೪ ಪಾಯಿಂಟ್ ೭೯ ಮಿಲಿಯನ್ ಟನ್ ಅದಿರು ಮಾರಾಟ ಮಾಡಿದೆ.

ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದಲ್ಲಿ, ಉತ್ಪಾದನೆಯಲ್ಲಿ ಶೇಕಡ ೯ ಹಾಗೂ ಮಾರಾಟದಲ್ಲಿ ಶೇಕಡ ೭ ರಷ್ಟು ಹೆಚ್ಚಿನ ಸಾಧನೆ ಮಾಡಿದಂತಾಗಿದೆ.

*******ಮುಕ್ತಾಯ*********